ಶಾಲಾ ಕಟ್ಟಡಗಳು ಶಿಥಿಲಗೊಂಡಿರುವುದು

1374(1220); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ನಲ್ಲರಾಳ್ಳಹಳ್ಳಿ ಮತ್ತು ಚಿಕ್ಕಬೊಮ್ಮನಹಳ್ಳಿ ಸರ್ಕಾರಿ ಶಾಲೆ ಶಿಥಿಲಾವಸ್ಥೆಯಲ್ಲಿದ್ದು, ಉಪಯೋಗಿಸಲು ಯೋಗ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲಾಗುವುದು?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

ಸ.ಕಿ.ಪ್ರಾ ಶಾಲೆ ನಲ್ಲರಾಳ್ಳಹಳ್ಳಿಯಲ್ಲಿ ಒಟ್ಟು 15 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, 1 ಕೊಠಡಿ ಇರುತ್ತದೆ. ಹಾಗೆಯೇ ಸ.ಕಿ.ಪ್ರಾ ಶಾಲೆ ಚಿಕ್ಕಬೊಮ್ಮನಹಳ್ಳಿಯಲ್ಲಿ ಒಟ್ಟು 14 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, 1 ಕೊಠಡಿ ಇರುತ್ತದೆ. ಈ ಕೊಠಡಿಗಳ ದುರಸ್ಥಿ ಅವಶ್ಯಕತೆ ಇರುತ್ತದೆ.

ಆ) 2015–16ನೇ ಸಾಲಿನ ಎಸ್.ಎಸ್.ಎ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಸದರಿ ಶಾಲಾ ಕೊಠಡಿಗಳ ದೊಡ್ಡ ಪ್ರಮಾಣದ ದುರಸ್ಥಿಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಇ) ಕೇಂದ್ರ ಸರ್ಕಾರದಿಂದ ಅನುದಾನ ಮಂಜೂರಾತಿ ದೊರೆತ ನಂತರ ದುರಸ್ಥಿಗೆ ಕ್ರಮವಹಿಸಲಾಗುವುದು.